ದಿನಾಂಕಃ 19-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ವಕೀಲರಿಂದ,

1) ನನ್ನನ್ನು ಶಂಕರೇಗೌಡ ಎಂದು ಒಂದೇ ಹೆಸರಿನಿಂದ ಕರೆಯುತ್ತಾರೆ. ನನಗೆ ನಿಶಾನೆ ಡಿ-58 ದಾಖಲೆಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ರಾಜಿ ಅರ್ಜಿಯಂತೆ ಪ್ರತಿವಾದಿ 5 ರವರಿಗೆ ಸರ್ವೇ ನಂ. 3/1 ರಲ್ಲಿ 1 ಎಕರೆ 30 ಗುಂಟೆ ಹಂಚಿಕೆ ಆಗಿರುತ್ತದೆ. ಅದೇ ರೀತಿ ಸರ್ವೆ ನಂ. 21 ರಲ್ಲಿ 1 ಎಕರೆ 10 ಗುಂಟೆ ಹಂಚಿಕೆ ಆಗಿರುತ್ತದೆ. ಅದೇ ರೀತಿ 20 ಗುಂಟೆ ಹಂಚಿಕೆ ಆಗಿರುತ್ತದೆ ಸದರಿ ವಿಸ್ತೀರ್ಣದ ಸರ್ವೆ ನಂಬರ ಗೊತ್ತಿರುವುದಿಲ್ಲ. ಸದರಿ ರಾಜಿ ಅರ್ಜಿಯಂತೆ ವಾದಿಯ ತಂದೆಗೆ ಯಾವುದೇ ಆಸ್ತಿಗಳನ್ನು ಹಂಚಿಕೆ ಮಾಡಿರುವುದಿಲ್ಲ.

2) ಅಸಲು ದಾವೆ ಸಂಖ್ಯೆ 366/1989 ರಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಿದ್ದರು. ನನ್ನ ತಂದೆ ಅವಿದ್ಯಾವಂತರಾಗಿರುವ ಕಾರಣ ಹೆಬ್ಬಟ್ಟು ಗುರುತು ಹಾಕುತ್ತಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 366/1989 ರಲ್ಲಿ ಆಗಿರುವ ರಾಜಿ ವಿಷಯ ವಾದಿಯ ತಂದೆಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆಗೆ ಮೋಸ ಮಾಡಬೇಕೆಂದು ರಾಜಿ ವಿಷಯವನ್ನು ತಿಳಿಸದೆ ವಾದಿಯ ಕಡೆಯಿಂದ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ತಂದೆ ಸದರಿ ದಾವೆಯ ಬಗ್ಗೆ ವಾದಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

3) ನಿಶಾನೆ ಡಿ-62 ವಿಭಾಗ ಪತ್ರವನ್ನು ನಾನು ಮತ್ತು ಪ್ರತಿವಾದಿ 2 ರವರು ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಪ್ರಥಮ ಬಾರಿಗೆ 2004 ರಲ್ಲಿ ವಿಭಾಗ ಪತ್ರ ಆಗಿರುತ್ತದೆ. 1989 ನೇ ಸಾಲಿನಲ್ಲಿ ಯಾವುದೇ ವಿಭಾಗ ಪತ್ರ ಆಗಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಶಾನೆ ಡಿ-62 ವಿಭಾಗ ಪತ್ರಕ್ಕೆ ಗೋವಿದೇಗೌಡ, ಸುಂದ್ರೇಗೌಡ ಮತ್ತು ಪುಟ್ಟಸ್ವಾಮಿ ರವರು

ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಸದರಿ ಸಾಕ್ಷಿದಾರರು ಈಗ ಜೀವಂತ ಇರುವುದಿಲ್ಲ. ಪತ್ರ ಬರಹಗಾರರು ಜೀವಂತ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗೆ ಭಾಗಂಶ ನೀಡುವುದನ್ನು ತಪ್ಪಿಸುವ ಸಲುವಾಗಿ ನಿಶಾನೆ ಡಿ-62 ವಿಭಾಗ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 4 ರವರು ಸಹಿ ಮಾಡುತ್ತಾರೆ. ನಾನು ಮತ್ತು ಪ್ರತಿವಾದಿ 3 ರವರು ಹೆಬ್ಬಟ್ಟು ಗುರುತು ಹಾಕುತ್ತೇವೆ. ನಿಶಾನೆ ಡಿ-62 ದಾಖಲೆಗೆ ವಾದಿಯ ತಂದೆ ಸಹಿ ಮಾಡಿರುವುದಿಲ್ಲ. ನಿಶಾನೆ ಡಿ-62 ದಾಖಲೆಯಲ್ಲಿ ಎರಡು ಹೆಬ್ಬಟ್ಟು ಗುರುತುಗಳು ಇರುತ್ತವೆ. ಉದ್ದೇಗೌಡ ರವರು ಸಹ ಹೆಬ್ಬರು ಗುರುತು ಹಾಕಿರುತ್ತಾರೆ. ಉದ್ದೇಗೌಡರವರು ನಿಶಾನೆ ಡಿ-62 ದಾಖಲೆಯಲ್ಲಿ ಯಾವುದೇ ಹೆಬ್ಬಟ್ಟು ಗುರುತು ಹಾಕದೇ ಇದ್ದರೂ ಸಹ ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

4) ರಾಜಿ ಅರ್ಜಿಯಂತೆ ನನಗೆ ಸರ್ವೇ ನಂ.21 ರಲ್ಲಿ 1 ಎಕರೆ 7 ಗುಂಟೆ ಬಂದಿರುತ್ತದೆ ಎಂದರೆ ಸರಿ. ನಿಶಾನೆ ಡಿ-62 ವಿಭಾಗ ಪತ್ರದಂತೆ ಸರ್ವೇ ನಂ.21 ರಲ್ಲಿ 1 ಎಕರೆ 6 ಗುಂಟೆ ನನಗೆ ಬಂದಿರುತ್ತದೆ. ಅದೇ ರೀತಿ ನಾಗೇಗೌಡ ರವರಿಗೆ 1 ಎಕರೆ 10 ಗುಂಟೆ ಹಂಚಿಕೆ ಆಗಿರುತ್ತದೆ.

5) ನಿಶಾನೆ ಡಿ-60 ಹಕ್ಕು ಬಿಡುಗಡೆ ಪತ್ರದಲ್ಲಿ ನಮ್ಮ ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿ ಮತ್ತು ಸ್ವಯಾರ್ಜಿತ ಆಸ್ತಿಗಳು ಉಳಿದುಕೊಂಡಿವೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಸಮಯದಲ್ಲಿ ಹೈನುಗಾರಿಕೆ ಮಾಡುತ್ತಿದ್ದೆ. ನಾನು ಸರ್ವೆ ನಂ. 43 ರಲ್ಲಿ 20 ಗುಂಟೆ ಆಸ್ತಿಯನ್ನು 25 ವರ್ಷಗಳ ಹಿಂದೆ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತುಗಳಗಲ್ಲಿ ವಾದಿ ಜಂಟಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಗಲ್ಲಿ ವಾದಿಗೆ ಭಾಗಾಂಶ

ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಿಶಾನೆ ಡಿ-62 ವಿಭಾಗ ಪತ್ರದಂತೆ ನನ್ನ ತಂದೆಗೆ ಯಾವುದೇ ಆಸ್ತಿಯನ್ನು ನೀಡಿರುವುದಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ